# ಅತ್ತೆ

ಅವಳ ಕೊನೆಯನ್ನು ನೋಡಲು ಸಾಧ್ಯವಿರಲಿಲ್ಲ. ಆಕೆ ದೂರದಿಂದ ಅಪ್ಪನ ತಂಗಿಯಾಗಿ ನನಗೆ ಅತ್ತೆಯಾಗಿದ್ದಳು. ಬಾಲ್ಯದಲಿ ಅವಳ ಎದೆ ಮೇಲೆ ಮಲಗಿ ಆಟವಾಡಿದ್ದೆ. ಗಂಡನ ಬಿಟ್ಟು ಬಂದು ತಾಯಿ ಮನೆ ಸೇರಿ ದೇಹ ಮಾರಿಕೊಂಡು ಬದುಕುತ್ತಿದ್ದ ಅವಳ ಬಗ್ಗೆ ಯಾರಿಗೂ ಗೌರವ ಇರಲಿಲ್ಲ. ನನ್ನನ್ನು ಅತ್ತೆ ಬಹಳ ಮುದ್ದು ಮಾಡುತ್ತಿದ್ದಳು. ಅವಳ ಸಕ್ಕರೆ ಮಿಠಾಯಿಗೆ ನಾನು ಕರಗಿ ಹೋಗುತ್ತಿದ್ದೆ. ನಾನು ನಗರ ಸೇರಿದ್ದೆ. ಅವಳಿಗೆ ವಯಸ್ಸಾಗಿತ್ತು. ಮಸಣದ ಕಾಯಿಲೆ ಅಂಟಿ ನೆಲಕಚ್ಚಿ ಮಲಗಿದ್ದಳು. ಸುದ್ದಿ ತಿಳಿಯಿತು. ನಾಗರಿಕ ಸಮಾಜ ತನ್ನ ಹಿಂದಿನ ದಾರಿಗಳನ್ನು ಮರೆತುಬಿಟ್ಟಿರುತ್ತದೆ. ಆ ಅತ್ತೆಯ ಆ ಸ್ಥಿತಿಗೆ ನಾನು ಮರುಗಿದೆ. ಗುಣಪಡಿಸಲಾಗದ ಕಾಯಿಲೆ ದಿನೆ ದಿನೆ ಅವಳನ್ನು ತಿನ್ನುತ್ತಿರುವುದನ್ನು ತಡೆಯಲು ಸಾಧ್ಯವಿರಲಿಲ್ಲ. ಅವಳಿಗೆ ಏಡ್ಸ್ ಅಂಟಿಕೊಂಡಿತ್ತು.

ಅತ್ತೆಯ ಬಗ್ಗೆ ಹಿಂದೆ ಒಂದು ಕಥೆ ಬರೆದಿದ್ದೆ. ಅದನ್ನು ತಪ್ಪಾಗಿ ತಿಳಿಸಿದ್ದರು. ತನ್ನನ್ನು ಅವನೂ ಕೂಡ ಸೂಳೆ ಎಂದು ಪೇಪರಲ್ಲಿ ಹಾಕಿಸಿರುವನೇ ಎಂದು ತಿಳಿದು ಬಹಳ ನೊಂದುಕೊಂಡಿದ್ದಳು. ಊರನ್ನು ಬಿಟ್ಟು ಬಹಳ ವರ್ಷವಾಗಿತ್ತು. ಸಂಬಂಧಗಳೂ ತುಂಡಾಗಿದ್ದವು. ಅತ್ತೆಯ ಚೆಲುವು ಸುಳಿಯಿತು. ನಿಜವಾಗಿಯೂ ಅವಳು ಬಹಳ ಸುಂದರವಾಗಿದ್ದಳು. ಈಗವಳು ಹೇಗಿರುವಳೊ; ನೋಡಲೇಬೇಕಲ್ಲ ಎಂಬ ವಿಪರೀತ ಕುತೂಹಲ ಕಾಡಿತು. ಅದೇ ವೇಳೆಗೆ ಜಾಗತಿಕ ವೇದಿಕೆಯಲ್ಲಿ ಭಾರತದ ಕೆಳಜಾತಿಗಳ ಮಹಿಳೆಯರು ಹೇಗೆ ಈ ಏಡ್ಸ್ ವ್ಯೂಹಕ್ಕೆ ಸಿಲುಕುವರು ಎಂಬ ಬಗ್ಗೆ ವಿಚಾರ ಮಂಡಿಸಲು ಆಹ್ವಾನ ಬಂದಿತ್ತು. ಅಲ್ಲಿ ಹೋಗಿ ಅತ್ತೆಯ ಕತೆ ಹೇಳಿದರಾಯಿತು ಎಂದು ಸಿದ್ಧನಾದೆ. ಉಪಾಯವೊಂದು ಸಿಕ್ಕಿತು. ಮಗಳ ಮುಡಿಯ ಮನೆ ದೇವರಿಗೆ ಕೊಡುವುದಿತ್ತು. ಹೆಂಡತಿಗೆ ಹೇಳಿದೆ: ನೋಡೂ ಹೇಗೂ ಮಗಳ ಮುಡಿಯನ್ನು ಕೊಡಲೇಬೇಕೆಂದು ಹೇಳುತ್ತಲೇ ಇದ್ದಾರೆ. ಆ ಮುಡಿಯನ್ನೂ ಕೊಡಿಸಿ, ಊರವರ ಮಾತಾಡಿಸಿಕೊಂಡು, ಹಾಗೇ ಆ ಹಳೆಯ ನನ್ನ ಊರು ಕೇರಿ ಮನೆ ಹಾಗೂ ಆ ಅತ್ತೆಯ ಫೋಟೊ ತೆಗೆದು ಪುಟ್ಟ ಡಾಕ್ಯುಮೆಂಟರಿ ಮಾಡಿಕೊಂಡು ಬಾ... ಆ ಅತ್ತೆಯ ಕೊನೆಯ ಗಳಿಗೆಯ ಆ ಮೂಲಕ ನೋಡಿ ಮನಸ್ಸಲ್ಲೇ ಕೈ ಮುಗಿಯುವೆ ಎಂದೆ.